SC No.71/2022
CW-04 / PW-09

## ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 71/2022

ಚಾ.ಸಾಃ 04 ಪ್ರಾ.ಸಾಃ 09

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 31.10.2025

| | | |
|---|---|---|
| ಸಾಕ್ಷಿಯ ಹೆಸರು | : | ಉಮೇಶ |
| ತಂದೆಯ ಹೆಸರು | : | ಲಕ್ಷ್ಮಣ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದಲ್ಲಿರುವ ಆರೋಪಿತರು ನನಗೆ ಗೊತ್ತಿಲ್ಲ. 6 ನೇ ಆರೋಪಿ ಯಮನಪ್ಪ ಏನ್ನನ್ನೂ ತೋರಿಸಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಮಹಜರಗಳನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ಸಾಕ್ಷಿಯು ನಿಪಿ.2 ಮತ್ತು 3 ರ ಜಪ್ತಿ ಮಹಜರಗಳನ್ನು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಗಳನ್ನು **ನಿಪಿ.2(ಸಿ) ಮತ್ತು ನಿಪಿ.3(ಡಿ)** ಎಂದು ಗುರುತಿಸಲಾಯಿತು.

02. ಸಾಕ್ಷಿಯು ನಿಪಿ.2(ಬಿ) ಮತ್ತು 3(ಬಿ) ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಪೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ. ನಿಪಿ.2 ಮತ್ತು 3 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

03. ದಿನಾಂಕ 25.03.2021 ರಂದು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಪೋಲಿಸರು 6 ನೇ ಆರೋಪಿ ಹೇರ್ ಕಂಪ್ರೆಸರನ್ನು ಎಲ್.ಎಲ್.ಬಿ ರೈಸ್ ಮೀಲ್ ನಲ್ಲಿ ಹಾಜರು ಪಡಿಸಿದ್ದು, ಪೋಲಿಸರು ಅದನ್ನು ವಶಪಡಿಸಿಕೊಂಡು ನಿಪಿ.2 ರ ಪ್ರಕಾರ ಮಹಜರ ಮಾಡಿದರು ಎನ್ನುವುದು ಸರಿಯಲ್ಲ.

04. ನಂತರ 6 ನೇ ಆರೋಪಿ ಗುನ್ನೆ ಸ್ಥಳ ತೋರಿಸಿದನು ಎನ್ನುವುದು ಸರಿಯಲ್ಲ. ಅಲ್ಲಿ ನಿಪಿ.3 ರ ಪ್ರಕಾರ ಪೋಲಿಸರು ಮಹಜರ ಮಾಡಿದರು ಎನ್ನುವುದು ಸರಿಯಲ್ಲ.

05. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎನ್ನುವುದು ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.